ಕರ್ನಾಟಕ ಸರಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

DTE 03 CDC(1) 2019-20

ಆಯುಕ್ತರ ಕಚೇರಿ,
ತಾಂತ್ರಿಕ ಶಿಕ್ಷಣ ಭವನ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 17/12/2020

**ಅಧಿಕೃತ ಜ್ಞಾಪನ**

ವಿಷಯ: 2020-21ನೇ ಸಾಲಿನಿಂದ ರಾಜ್ಯದ 1ನೇ ಮತ್ತು 2ನೇ ಸೆಮಿಸ್ಟರ್ ಡಿಪ್ಲೊಮಾ ಪ್ರೋಗ್ರಾಂಗಳಿಗೆ ಹಾಗು ಪೋಸ್ಟ್ ಡಿಪ್ಲೊಮಾ ಪ್ರೋಗ್ರಾಂಗಳಿಗೆ C-20 ಪರಿಷ್ಕೃತ ಪಠ್ಯಕ್ರಮಗಳನ್ನು ಅಳವಡಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಪತ್ರ ಸಂ.ಇಡಿ 112 ಟಿಪಿಇ 2019, ದಿನಾಂಕ: 10/08/2020.
2. ರೆಗುಲೇಷನ್ಸ್ ಆಫ್ ಡಿಪ್ಲೊಮಾ ಪ್ರೋಗ್ರಾಂ ಫೋರ್ ದ ಕರಿಕುಲಮ್-೨೦೨೦.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ರಾಜ್ಯದ ಡಿಪ್ಲೊಮಾ ಪ್ರೋಗ್ರಾಂಗಳಿಗೆ ಹಾಗು ಪೋಸ್ಟ್ ಡಿಪ್ಲೊಮಾ ಪ್ರೋಗ್ರಾಂಗಳಿಗೆ 2020-21ನೇ ಸಾಲಿನಿಂದ ಪರಿಷ್ಕೃತ ಪಠ್ಯಕ್ರಮಗಳನ್ನು ಅಳವಡಿಸಲು ಅನುಮತಿಸಲಾಗಿದೆ. ಪರಿಷ್ಕೃತ ಪಠ್ಯಕ್ರಮಗಳ ನಿಯಮಾವಳಿ / ರೂಪುರೇಷೆಗಳನ್ನು ಉಲ್ಲೇಖ(2)ರಲ್ಲಿ ಪ್ರಕಟಿಸಲಾಗಿದೆ.

ಡಿಪ್ಲೊಮಾ ವ್ಯಾಸಂಗದ 1ನೇ ಮತ್ತು 2ನೇ ಸೆಮಿಸ್ಟರ್ ಹಾಗು ಪೋಸ್ಟ್ ಡಿಪ್ಲೊಮಾ (Software Testing / Industrial Safety) ವ್ಯಾಸಂಗದ ಪರಿಷ್ಕೃತ ಪಠ್ಯಕ್ರಮಗಳನ್ನು ಹಾಗು ನಿಯಮಾವಳಿ/ರೂಪುರೇಷೆಗಳನ್ನು ಆಯುಕ್ತಾಲಯದ ಜಾಲತಾಣ (dtek.karnataka.gov.in)ದಲ್ಲಿ ಪ್ರಕಟಿಸಲಾಗಿದೆ. ಸಂಸ್ಥೆಗಳ ಪ್ರಾಚಾರ್ಯರುಗಳು 2020-21ನೇ ಸಾಲಿನಿಂದ 1ನೇ ಮತ್ತು 2ನೇ ಸೆಮಿಸ್ಟರ್ ಡಿಪ್ಲೊಮಾ / ಪೋಸ್ಟ್ ಡಿಪ್ಲೊಮಾ ವ್ಯಾಸಂಗದಲ್ಲಿ C-20 ಪರಿಷ್ಕೃತ ಪಠ್ಯಕ್ರಮಗಳನ್ನು ಉಲ್ಲೇಖ(2)ರಲ್ಲಿ ಪ್ರಕಟಿಸಿರುವ ನಿಯಮಾವಳಿ/ರೂಪುರೇಷೆಗಳಂತೆ ಅಳವಡಿಸಿ, ಕ್ರಮ ವಹಿಸಲು ಸೂಚಿಸಿದೆ. ಪ್ರಥಮ ಸೆಮಿಸ್ಟರ್ ಡಿಪ್ಲೊಮಾ ವಿದ್ಯಾರ್ಥಿಗಳಿಗೆ, ಸೆಮಿಸ್ಟರ್ ಪ್ರಾರಂಭದಲ್ಲಿ ಎರಡು ವಾರಗಳ "Induction Program" ನಡೆಸುವ ಮಾದರಿ ಕಾರ್ಯಕ್ರಮಸೂಚಿಯನ್ನು ಪಠ್ಯಕ್ರಮಗಳಲ್ಲಿ ಪ್ರಕಟಿಸಿದೆ. ಸಂಸ್ಥೆಯ ಪ್ರಾಚಾರ್ಯರು ಪಠ್ಯಕ್ರಮಗಳಲ್ಲಿ ನಿಗಧಿಪಡಿಸಿರುವ ಭೋಧನಾ ಕಾರ್ಯಭಾರಗಳನ್ನು ಉಪನ್ಯಾಸಕರು / ಭೋಧಕರುಗಳಿಗೆ ನಿಯಮಾನುಸಾರ ಹಂಚಿ ಪಠ್ಯಕ್ರಮ ಚಟುವಟಿಕೆಗಳನ್ನು ಮುಂದುವರೆಸಲು ತಿಳಿಸಿದೆ.

2020-21ನೇ ಸಾಲಿನ 3ನೇ ಮತ್ತು 5ನೇ ಸೆಮಿಸ್ಟರ್ ಡಿಪ್ಲೊಮಾ ವ್ಯಾಸಂಗಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ C-15 ಪಠ್ಯಕ್ರಮಗಳು ಅನ್ವಯಿಸಿದ್ದು, ಸದರಿ ವಿದ್ಯಾರ್ಥಿಗಳಿಗೆ C-15 ಪಠ್ಯಕ್ರಮಗಳ ನಿಯಮಾವಳಿ/ರೂಪುರೇಷೆಗಳು ಅನ್ವಯಿಸುತ್ತವೆ.

ಆಯುಕ್ತರು

ಇವರಿಗೆ:

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಪ್ರಾಚಾರ್ಯರುಗಳಿಗೆ- ಸೂಕ್ತ ಕ್ರಮಕ್ಕಾಗಿ.

ಪ್ರತಿ: ನಿರ್ದೇಶಕರು, ಜಂಟಿ ನಿರ್ದೇಶಕರು (ಆಡಳಿತ)/ (ಪರೀಕ್ಷೆ)/ (ತನಿಖೆ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು- ಸೂಕ್ತ ಕ್ರಮಕ್ಕಾಗಿ.